

ಅಂದು ಭೀಮರಾವ್ ಎದುರಾದರು. ಏಕೋ ಮನದಲ್ಲಿ ಅವರನ್ನು ತಪ್ಪಿಸಿಕೊಂಡು ಮುಂದೆ ಹೋಗುವ ತುಡಿತವಿತ್ತು. ಆದರೆ, 'ಮೇಡಂ' ಅನ್ನುತ್ತಾ ಬಂದ ಅವರನ್ನು ದಾಟಿ ಹೋಗಲಾಗದೆ ನಿಂತೆ.

'ನೋಡಿ ಮೇಡಂ ಎಂಥ ಕೆಲಸವಾಗಿದೆ?' ಆತನ ಮುಖದಲ್ಲಿ ಕಪ್ಪು ನೆರಳು. 'ಏನಾಯ್ತು?' ಕೇಳಿದೆ.

'ವಾಸಂತಿ... ವಾಸಂತಿ...' ಎರಡು ಸಲ ತೊದಲಿ – 'ನಾಲ್ಕು ದಿನದಿಂದ, ನನ್ನನ್ನು ಮರೆತುಬಿಡಿ ಕಳಿಸಿಲ್ಲ, ತುಂಬಾ ಯೋಚ್ನೆಯಾಗಿಬಿಟ್ಟಿದೆ... ಅವಳಿಗೆ ಏನೋ ಅಪಾಯವಾಗಿದೆ?'

ಆತನ ಆತಂಕ ನೋಡಿ ಅಯ್ಯೋ ಪಾಪ ಅನಿಸಿತು. ಅವಳು ಸುಖವಾಗಿರಲಿ ಎಂದು ಆತನ ಮನಸ್ಸು ಈಗಲೂ ಬಯಸುತ್ತಿದೆ ಅಂದರೆ ಈತ ಮಹಾನ್ ವ್ಯಕ್ತಿಯೇ ಅನಿಸಿ, ನನ್ನ ಕಣ್ಣುಗಳು ತುಂಬಿದ್ದು ಆತನಿಗೆ ಕಾಣದಿರಲಿ ಎಂದು ಬೇರತ್ತ ಮೊಗ ಮಾಡಿ ನಿಂತೆ.

'ಮೇಡಂ, ನನಗೆ ಹದಿನೈದು ದಿನ ರಜಾ ಬೇಕು' ಎಂದು ಕೈ ಮುಗಿದರು.

ಭೀಮರಾವ್ ದೊಡ್ಡ ವ್ಯಕ್ತಿಯಾಗಿ ಕಂಡಿದ್ದರು. ದಿನವೂ ಅವಳು ಕಳಿಸುತ್ತಿದ್ದ 'ನನ್ನನ್ನು ಮರೆತು ಬಿಡಿ' ಹೇಳಿಕೆಗೆ ಗೋಣಗುತ್ತಿದ್ದ ಭೀಮರಾವ್, ಇಂದು ಅವಳ ಮೆಸೇಜ್ ಬಂದಿಲ್ಲ ಅಂತ ಕೊರಗುತ್ತಿದ್ದಾರಲ್ಲಾ! ಇದೇ ನಿಜವಾದ ಪ್ರೀತಿಯಲ್ಲವೆ?

ಮೊಬೈಲ್ ಸದ್ದು. 'ಹನಿ, ಕೆನ್ ಐ ಕಾಲ್ ಯು.' ಇವನು ಮಿತಿ ಮೀರಿದ್ದಾನೆ ಅನಿಸಿತು,

'ನಿನ್ನೆ ವಿಡಿಯೊ ಕಾಲ್‌ನಲ್ಲಿ ನಿಮ್ಮನ್ನ ನೋಡಿ ಖುಷಿಗೊಂಡೆ. ನಿಮ್ಮ ತಾಳಿ ಸರ ತೂಗಾಡುತ್ತಿತ್ತು, ಬೈತಲೆಯಲ್ಲಿ ಕೆಂಪು ಕುಂಕುಮ, ಹೊಳೆವ ಮೂಗುತಿ... ವಾಹ್ಹ್ ಅದ್ಭುತ! ಐಮ್ ವೆರಿ ಹ್ಯಾಪಿ' ಅಂದ.

'ನಾನು ಹೀಗೇ ಇದೀನಿ...' ಅಂದೆ.

'ಸುಳ್ಳು. ಆ ದಿನ ನೀವು ಜೂಮ್ ಕಾಲ್‌ನಲ್ಲಿ ಬಂದಾಗ ಬೇರೆ ಇತ್ತು?' ಒತ್ತಿ ಕೇಳಿದ.

'ರಾವ್ ಕಟ್ಟಿದ್ದ ಮಂಗಳಸೂತ್ರ ತೆಗೆದಿರುತ್ತೇನೆ.'

'ಓಹ್, ಹೌದಾ? ನಿಮಗಾಗಿ ಮಂಗಳಸೂತ್ರ ಪರ್ಚೇಸ್ ಮಾಡುವೆ.' ನನ್ನ ಮೈ ಮುಳ್ಳಾಯ್ತು.

'ಇಫ್ ಯು ಕ್ರೈ , ಐ ಕ್ರೈ ಟು.'

'ಸಾರಿ, ಎಷ್ಟು ದಿನ ಬದುಕಿದ್ದೂ ಸಾಯುತ್ತೀರಿ? ಕಪ್ಪು ಕನ್ನಡಕ ಕಿತ್ತು ಬಿಸಾಕಿ. ಕಮ್ ಔಟ್ ಶಾಲಿನಿ, ಬರುವ ಮೇನಲ್ಲಿ ನಾನು ಅಲ್ಲಿಗೆ, ಇಲ್ಲಾ ನವೆಂಬರ್‌ನಲ್ಲಿ ನೀವು ಇಲ್ಲಿಗೆ ಬರುವ ಸಿದ್ಧತೆ ಮಾಡ್ತೀನಿ, ವಿ ಲಿವ್ ಟುಗೆದರ್ ಅಂಡ್ ಡೈ ಟುಗೆದರ್. ಐ ವಾಂಟ್ ಟು ಶೌಟ್ ಅಂಡ್ ಸೇ ಟು ದಿ ಹೋಲ್ ವರ್ಲ್ಡ್' ಎಂದು ಅರಚಿದ.

'ಹುಚ್ಚರ ಸಂತೇಲಿ ಕಳೆದುಹೋದೆ ಬಿಡು' ಎನ್ನುತ್ತ ಮೊಬೈಲ್ ಆಫ್ ಮಾಡಿದೆ. ಮೈಯೊಳಗಿನ ರಕ್ತ ಕುದಿಯಿತು. ಏನು ತಿಳಿದಿದ್ದಾನೆ ಇವನು ನನ್ನ? ಇವನ ಉದ್ದೇಶ ಇಷ್ಟು ಕೆಟ್ಟದಾಗಿದೆ! ಛೇ ಆವೇಶದಿಂದ ಸಂದೇಶ ಕಳಿಸಲು ಕೂತೆ.

'ಏಯ್, ಇಲ್ಲಿ ಕೇಳೊ... ಏನು ಬೊಗಳಿದೆಯೊ? ನನಗೆ ಮಂಗಳಸೂತ್ರವೆ? ಒಳ್ಳೆ ತಂತ್ರ ಕಣೊ? ಮಂಚಕ್ಕೆ ನೀನು ಕರೆದಾಗ ಬರುವ ಸಿದ್ಧತೆ ಅನ್ನು, ಅಂಥ ಅವಶ್ಯಕತೆ ನನಗಿಲ್ಲ. ಅಕ್ಕ ತಂಗಿಯರ ಜೊತೆ ಹುಟ್ಟಿ ಅಸಭ್ಯ ವರ್ತನೆ! ನಿನ್ನ ಮಿಲಿಯನ್ ಬಿಲಿಯನ್‌ಗಳಿಗೆ ಬೆಂಕಿ ಹಾಕು. ಕೊಳಕು ಮನಸ್ಸು ನಿನ್ನದು. ಸಹೃದಯಿ, ವಿಶ್ವಾಸಿ, ನಂಬಿಕೆಗೆ ಅರ್ಹ ಅಂದುಕೊಂಡೆ, ವಿಶ್ವಾಸಘಾತುಕ ನೀನು...'

ರವಾನಿಸಿಯೇ ಬಿಟ್ಟೆ. ಮನದ ಕುದಿ ಸ್ವಲ್ಪ ಕಡಿಮೆಯಾದಂತೆ ಮಂಚಕ್ಕೆ ಉರುಳಿ, ಬರಹ ಪರೀಕ್ಷಿಸಿ ಹಗುರಾಗಲು ಹೋದೆ. ಮೇಲೇರಿದ ಬೆರಳು ತಕ್ಷಣವೇ ನಿಂತಿತ್ತು.

'ಜಸ್ಟ್ ಥಿಂಕಿಂಗ್ ಆಫ್ ಯು, ವಿಲ್ ಮೇಕ್ ಆನ್ ಅಟೆಂಪ್ಟ್ ಟು ಸ್ಲೀಪ್. ವೆನ್ ಐ ಡಿಡ್ ನಾಟ್ ರಿಸೀವ್ ರಿಪ್ಲೈ, ಐ ಫೆಲ್ಟ್ ದಟ್ ಐ ಮೈಟ್ ಹ್ಯಾವ್ ಹರ್ಟ್ ಯು. ಹೆನ್ಸ್ ಕುಡ್ ನಾಟ್ ಸ್ಲೀಪ್. ಹಾನೆಸ್ಟ್ಲಿ – ಐ ಜಸ್ಟ್ ಸೆಡ್ ವಾಟ್ ವಾಸ್ ಇನ್ ಮೈ ಮೈಂಡ್. ಐ ಯಾಮ್ ಸಾರಿ, ಐ ಯಾಮ್ ಕ್ರೈಯಿಂಗ್, ಐ ವಿಲ್ ಜಸ್ಟ್ ವಾಷ್ ಯುವರ್ ಫೀಟ್ ವಿತ್ ಮೈ ಟಿಯರ್ಸ್.'

ಮೆತ್ತಗಾದೆ. ನನ್ನ ಮೆಸೇಜ್ ಅಳಿಸಿಬಿಡಲು ಮುಂದಾದೆ. ಅವನಾಗಲೇ ಆನ್‌ಲೈನ್, ಮನಸ್ಸು ಭಾರವಾಯಿತು.

ಸೀಟಿಗೆ ಬಂದೆ. ಮೆಲ್ಲ ಒಳಬಂದ ಭೀಮರಾವ್ ಅವರಿಗೆ ಕುರ್ಚಿ ಕಡೆ ಕೈತೋರಿದೆ. 'ಏನಾದ್ರೂ ಸಮಾಚಾರ?' ಕೇಳಿದೆ.

'ಹೌದು ಮೇಡಂ, ಇಂದು ನಾನು ಕೆಲಸ ರಿಸೈನ್ ಮಾಡ್ತಾ ಇದೀನಿ.' ಆತ ನಿಂತು ಕವರ್ ನನ್ನತ್ತ ಚಾಚಿದರು.

ಆತನ ಕಣ್ಣಂಚಿನಲ್ಲಿ ನೀರು ನೋಡಿದೆ. ಕಾರಣ ಕೇಳದೆ ಮೌನವಾದೆ. ಆತನೇ ಧ್ವನಿ ತಗ್ಗಿಸಿ, 'ಮೇಡಂ, ವಾಸಂತೀನ ಕರ್ಕೊಂಡು ಬಂದೆ. ನ್ಯೂಜೆರ್ಸಿಯಲ್ಲಿ ಮನೆಗೆಲಸಕ್ಕೆ ಯಾರೂ ಸಿಗಲಿಲ್ಲ ಅಂತ ಈ ಪ್ಲಾನ್ ಆಗಿತ್ತು, ಇವಳ ಪಾಸ್‌ಪೋರ್ಟ್ ಕಿತ್ತಿಟ್ಟುಕೊಂಡಿದ್ದರು. ವಾಸಂತಿ ತುಂಬಾ ಮುಗ್ಧಳು. ಕತ್ತೆ ದುಡಿತಕ್ಕೋ ಏನೋ ಕಪ್ಪಾಗಿ ಸವೆದು ಚಿಪ್ಪಾಗಿದ್ದಾಳೆ' ಅನ್ನುವಾಗ ಮತ್ತೆ ಕಣ್ಣೀರು ಉಕ್ಕಿತ್ತು.

'ಈಗ?' ನಾನು ಕೇಳಿದೆ.

'ಜಗಳವಾಡಿ ವಾಸಂತೀನ ಕರ್ಕೊಂಡು ಬಂದಾಯ್ತು, ಮನೇಲಿ ಅಮ್ಮನ ರಣರಂಪವಾಗಿದೆ' ಎಂದು ನಿಟ್ಟುಸಿರಿಟ್ಟರು.

'ಅದಕ್ಕೇ ನೀವು ಈಗ ಕೆಲಸಬಿಟ್ಟು ಹೊರಟರೆ...?' ತಡೆಯುವಂತೆ ಕೇಳಿದೆ.

'ನನ್ನ ಈ ನಿಲುವಿನಿಂದ ಜನ ನಗುತ್ತಿದ್ದಾರೆ.' ಭೀಮರಾವ್ ಮುಖ ಹಿಂಡಿದರು.

'ನೀವು ಬದುಕೋದು ನೋಡಿ, ಕೆಲಸ ಬಿಟ್ಟರೆ ಮುಂದೆ?'

'ಗೊತ್ತಾಗ್ತಾ ಇಲ್ಲ. ಮಕ್ಕಳು ಅಮ್ಮ ಅಂತ ಒಪ್ಪಿದ್ದಾರೆ, ನಾನೂ ಅವಳ ತಪ್ಪು ಕ್ಷಮಿಸಿದೆ, ಸುತ್ತಲಿನವರು?'

'ಎಷ್ಟು ದಿನ ಮಾತಾಡ್ತಾರೆ? ಇನ್ನೊಂದು ಹೊಸ ವಿಚಾರ ಸಿಗೋವರೆಗೂ?'

'ಮಕ್ಕಳ ಬಗ್ಗೆ ಯೋಚಿಸಿ. ಕೊಡಿ ಇಲ್ಲಿ ಆ ಕವರ್.'

ತೆಗೆದುಕೊಂಡು ಹರಿದುಹಾಕಿದೆ.

'ಸದ್ಯಕ್ಕೆ ಬೇರೆ ಮನೆ ಮಾಡಿ, ಬರೋ ಸಂಬಳದಲ್ಲಿ ಬದುಕು ನೋಡಿ' ಎಂದು ನನ್ನ ಫೈಲ್‌ಗಳತ್ತ ಗಮನಕೊಟ್ಟೆ.

ದಿನವೂ ಬೇಸರ. 'ಛೇ, ನಾನು ದುಡುಕಿದೆ.' ಸಂಜಯ್ ಧ್ವನಿ ಇಲ್ಲದೇ ದಿನ ದೂಡುವುದಾದರೂ ಹೇಗೆ? ಅವನಾದರೋ ತುಟಿ ಎರಡು ಮಾಡಿಲ್ಲ. ನಾನು ಇಷ್ಟೊಂದು ಹಚ್ಚಿಕೊಂಡಿದ್ದೆನೆ ಅವನನ್ನು?

ಅಂದು, ಎಂಡಿ ಕರೆ ಮಾಡಿ, 'ಶಾಲಿನಿ, ಯು ಆರ್ ದಿ ಬೆಸ್ಟ್ ವರ್ಕರ್. ನಿಮಗೆ ಇನ್ನಷ್ಟು ಜವಾಬ್ದಾರಿ ಕೊಟ್ಟು ಪೂನಾಗೆ ವರ್ಗ ಮಾಡಿದ್ದೇವೆ' ಅಂದು ಕರೆ ಕಟ್ ಮಾಡಿದರು.

ಸುದ್ದಿ ಆಫೀಸ್ ತುಂಬಾ ಅದೆಷ್ಟು ಬೇಗ ಹರಡಿತೆಂದರೆ... ಎಲ್ಲರೂ ಮಾತನಾಡಿಸಿ ಬೇಸರಿಸಿಕೊಂಡು ಹೋದರು. ಆದರೆ ಭೀಮರಾವ್ ಅತ್ತುಬಿಟ್ಟರು.

ಮನೆಯಲ್ಲಿ ಎಲ್ಲರೂ ಬೇಸರಗೊಂಡರು. ಸಂಜಯ್‌ಗೆ ಒಂದು ಮಾತು ಹೇಳದೆ ಮನ ನರಳಿತು.

'ಸಂಜಯ್ ಅವರೇ, ನಿಮ್ಮ ಮನಸ್ಸಿಗೆ ತುಂಬಾ ನೋವು ಮಾಡಿದೆ. ನನ್ನನ್ನು ಕ್ಷಮಿಸಿ. ಇದಕ್ಕಿಂತ ಹೆಚ್ಚಿಗೆ ಹೇಳಲಾರೆ. ನಮ್ಮ ಕೊನೆಯ ದಿನಗಳವರೆಗೂ ನಾವು ಒಳ್ಳೆಯ ಸ್ನೇಹಿತರು ಅನ್ನುತ್ತಿದ್ರಿ. ನನ್ನಿಂದ ಪ್ರಮಾದವಾಗಿದೆ. ಕ್ಷಮಿಸಿದ್ರೆ ಸಂತೋಷ. ಸ್ವಾಭಿಮಾನ ಒತ್ತೆ ಇಟ್ಟು ಕೇಳಿದ್ದೇನೆ. ನನಗೆ ಪೂನಾಗೆ ವರ್ಗವಾಗಿದೆ.'

ಮೆಸೇಜ್ ಕಳಿಸುವಾಗ, ಅವನು ಆನ್‌ಲೈನ್.

ಕನ್ನಡವನ್ನೇ ಇಂಗ್ಲಿಷ್ ಅಕ್ಷರಗಳಲ್ಲಿ, 'ನಿಮ್ಮ ಫೋಟೋನೇ ನೋಡುತ್ತಾ ಕೂತಿದ್ದೆ... ಐ ಮೀನ್ ಯುವರ್ ಬ್ಲಾಕ್ ಡಾರ್ಕ್ ಐಸ್... ಐ ಫೀಲ್ ಲೈಕ್ ಕ್ರೈಯಿಂಗ್. ಬಿಕಾಸ್ ಐ ಯಾಮ್ ಎ ಸೆನ್ಸಿಟಿವ್ ಅಂಡ್ ಅಫೆಕ್ಷನೇಟ್ ಪರ್ಸನ್. ವೆನ್ ಯು ಸೆ ಸಚ್ ಥಿಂಗ್ಸ್, ಇಟ್ ಹರ್ಟ್ಸ್ ಮಿ ಎ ಲಾಟ್ ಅಂಡ್ ಲಾಟ್. ದಟ್ ಈಸ್ ವೈ ಐ ಸ್ಟಾಪ್ಡ್ ಟಾಕಿಂಗ್ ಟು ಯು. ಯು ಆರ್ ಪ್ರೆಷಿಯಸ್. ನೋ ವನ್ ಇನ್ ಯುವರ್ ಸರೌಂಡಿಂಗ್ಸ್ ಲೈಕ್ ಟು ಲೂಸ್ ಯು. ವಿ ಶಲ್ ಬಿ ದೇರ್ ಫಾರ್ ಈಚ್ ಅದರ್ ಫಾರ್ ದಿ ರೆಸ್ಟ್ ಆಫ್ ಅವರ್ ಲೈವ್ಸ್...'

'ಇಡೀ ಪ್ರಪಂಚದಲ್ಲಿ ಯಾವ ದಿಕ್ಕಿನಲ್ಲಿದ್ದರೂ ನನ್ನ ಧ್ವನಿ ನಿಮ್ಮ ಧ್ವನಿಗೆ ಓಗೊಡುತ್ತದೆ. ಐ ಮಿಸ್ ಯು ಸೋ ಮಚ್. ಕೆನ್ ಯು ಸ್ಲೀಪ್ ನೌ ಶಾಲಿನಿ, ಪ್ಲೀಸ್ ಸ್ಲೀಪ್... ಗುಡ್‌ನೈಟ್.'

ಪ್ರತಿಕ್ರಿಯಿಸಿ: feedback@sudha.co.in